ದಿನಾಂಕಃ 05-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಡಿಎಂಜೆ ವಕೀಲರಿಂದ:

ನಾನು 10 ನೇ ತರಗತಿವರೆಗೆ ಅಭ್ಯಾಸ ಮಾಡಿರುತ್ತೇನೆ. 1 ನೇ ವಾದಿ ಪಿಯುಸಿ ವರೆಗೆ ಅಭ್ಯಾಸ ಮಾಡಿರುತ್ತಾರೆ. ನಮ್ಮ ತಾಯಿ 3 ನೇ ವಾದಿ ನಮ್ಮ ಜೊತೆ ವಾಸ ಇರುತ್ತಾರೆ. ನನ್ನ ತಂದೆ ಸುಮಾರು 13 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಅಜ್ಜ ಗದಿಗೆಪ್ಪ 2006 ರಲ್ಲಿ ಮೃತಪಟ್ಟಿರುತ್ತಾರೆ. ಆಗ ನನ್ನ ವಯಸ್ಸು 3-4 ವರ್ಷ ಇತ್ತು. ನನ್ನ ಅಜ್ಜ ಜೀವಿತ ಕಾಲದಲ್ಲಿ ಮಾಡಿದ ಕುಟುಂಬದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅಜ್ಜ ಸಹಿ ಮಾಡುತ್ತಿದ್ದನು. ನಿಪಿ-18 ರಲ್ಲಿ ನನ್ನ ಅಜ್ಜ ಗದಿಗೆಪ್ಪನ ಸಹಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜ ಗ.ತಿ.ಕಾಮಣ್ಣನವರ ಎಂದು ಸಹಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆ ಬಗ್ಗೆ ನಾನು ದಾಖಲೆಗಳನ್ನು ಹಾಜರಪಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ನಿಪಿ-18 ರಲ್ಲಿ ಇರುವಂತೆ ಸಹ ನನ್ನ ಅಜ್ಜ ಸಹಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಅಜ್ಜ ಗದಿಗೆಪ್ಪನ ಸಹೋದರನ ಹೆಸರು ಸಂಗಪ್ಪ ಎಂದರೆ ಸರಿ. ಸದರಿ ಸಂಗಪ್ಪ ಮೃತಪಟ್ಟಿರುತ್ತಾನೆ. ನನ್ನ ಅಜ್ಜನಿಗಿಂತ ಮೊದಲೇ ಸಂಗಪ್ಪ ಮೃತಪಟ್ಟಿರುತ್ತಾನೆ. ಸಂಗಪ್ಪ ಇವರ ಹೆಂಡತಿ ಮತ್ತು ಮಕ್ಕಳ ಲಾಲನೆ ಮತ್ತು ಪಾಲನೆಯನ್ನು ನನ್ನ ಅಜ್ಜ ಗದಿಗೆಪ್ಪ ನೋಡಿಕೊಂಡು ಹೋಗುತ್ತಿದ್ದ ಹಾಗೂ ಎಲ್ಲರೂ ಒಟ್ಟು ಕುಟುಂಬದ ಸದಸ್ಯರಾಗಿದ್ದರು ಎಂದರೆ ಸರಿ. ನನ್ನ ಅಜ್ಜ ಮೃತಪಡುವ 8-9 ವರ್ಷಗಳ ಮೊದಲು ಸಂಗಪ್ಪ ಮೃತಪಟ್ಟಿರುತ್ತಾನೆ ಎಂದರೆ ಸಾಕ್ಷಿ 4-5 ವರ್ಷಗಳ ಮೊದಲು ಮೃತಪಟ್ಟಿರುತ್ತಾನೆ ಎಂದು ಹೇಳುತ್ತಾರೆ.

ನಮ್ಮ ಕುಟುಂಬದಲ್ಲಿ ಸರ್ವೆ ನಂ.228/1, 228/1 ಬ, 164/1 ಬ, 101/5 ಈ ಎಲ್ಲಾ ಜಮೀನುಗಳು ನಮ್ಮ ಏಕತ್ರ ಕುಟುಂಬದ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ಮನೆತನಕ್ಕೆ ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತು. ಸದರಿ ಆಸ್ತಿಗಳ ಪೈಕಿ ಕೆಲವು ಆಸ್ತಿಗಳನ್ನು ಕೂಡಿ ಇದ್ದಾಗ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2 ಎಕರೆ 31 ಗುಂಟೆ ಕಾಂತಿ ಕುಟುಂಬಕ್ಕೆ ಮತ್ತು 8 ಎಕರೆ 34 ಗುಂಟೆ ಸುತಾರ ಕುಟುಂಬಕ್ಕೆ ಮಾರಾಟ ಮಾಡಿರುತ್ತಾರೆ. ಜಮೀನು ಸರ್ವೆ ನಂ.128/1 ಬ ಕ್ಷೇತ್ರ 12 ಎಕರೆ 25 ಗುಂಟೆ ಪೈಕಿ 10 ಎಕರೆ 21 ಗುಂಟೆ ನನ್ನ ಅಜ್ಜ ಗದಿಗೆಪ್ಪನ ಹೆಸರಿನಲ್ಲಿ ಇತ್ತು ಎಂದರೆ

ಸರಿ. ಜಮೀನು ಸರ್ವೆ ನಂ.228/1 ಸಂಗಪ್ಪನ ಮಕ್ಕಳ ಹೆಸರಿನಲ್ಲಿ ಈ ದಾವೆ ಸಲ್ಲಿಸುವಾಗ ಇತ್ತು ಎಂದರೆ ಸರಿ. ಸದರಿ ಜಮೀನು ಪ್ರತಿವಾದಿಯರ ಹೆಸರಿನಲ್ಲಿ ಯಾವ ಆಧಾರದ ಮೇಲೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ಪ್ರತಿವಾದಿಯರ ಹೆಸರಿನಲ್ಲಿ ವರ್ಗಾವಣೆಯಾದ ಡ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಗದಿಗೆಪ್ಪ ಮತ್ತು ಸಂಗಪ್ಪ ಕೂಡಿಕೊಂಡು ಕುಟುಂಬದ ಆಸ್ತಿಗಳ ಮೇಲೆ ಮನೆತನದ ಅಡಚಣೆಗಾಗಿ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸರಿ. ನಾನು ಹಾಜರಪಡಿಸಿದ ದಾಖಲೆಗಳಾದ ನಿಪಿ-18 ಸರಿ ಇರುತ್ತವೆ.

1 ನೇ ಪ್ರತಿವಾದಿ ನನ್ನ ವಿರುದ್ಧ ಪಾಲು ಕೋರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಇನ್ನೂ ಚಾಲ್ತಿಯಲ್ಲಿದೆ. ಸಾಕ್ಷಿ ಮುಂದುವರೆದು ಅಸಲು ದಾವಾ ಸಂ.231/2021 ವಜಾಗೊಂಡಿರುತ್ತದೆ, ಅಸಲು ದಾವಾ ಸಂ.233/2021 ಚಾಲ್ತಿಯಲ್ಲಿರುತ್ತದೆ. ಸದರಿ ದಾವೆಗಳನ್ನು ಸಲ್ಲಿಸಿದ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಆ ದಾವೆಗಳನ್ನು ಸಲ್ಲಿಸಿರುವುದರಿಂದ ಅದರ ಬದಲಾಗಿ ಪ್ರತಿವಾದಿಯರ ವಿರುದ್ಧ ಇದ್ದ ಸಿಟ್ಟಿನಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA
Date: 2025.08.05 17:58:13 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ